## ನಮೂನೆ-12 ನಿಯಮ 14(3)

## ಚುನಾವಣಾ ಸೂಚನೆ

## ರಿಟರ್ನಿಂಗ್ ಅಧಿಕಾರಿ, ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟಡ್, ರಾಜಾಜಿನಗರ , ಬೆಂಗಳೂರು ಇವರ ನಡವಳಿಗಳು.

ಮೇಲ್ಕಂಡ ಬ್ಯಾಂಕಿನ ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರನ್ನು ಚುನಾಯಿಸಲು ಚುನಾವಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ),ಕೇಂದ್ರ ಕಛೇರಿ, ಬೆಂಗಳೂರು ಇವರ ಆದೇಶ ಸಂಖ್ಯೆ:ಅನಿ(ಕೈ& ಹೈ)/ಚುನಾವಣೆ/44/2024-25, ದಿನಾಂಕ 22-11-2024 ರನ್ವಯ ನಾಗೇಶ್ ಶ್ರೀಪಾದ ಶೆಟ್ಟಿ, ಸಹಕಾರ ಅಭಿವೃದ್ಧಿ ಅಧಿಕಾರಿ ಆದ ನನ್ನನ್ನು ರಿಟರ್ನಿಂಗ್ ಆಫೀಸರ್ ಆಗಿ ನೇಮಕ ಮಾಡಿದ್ದು, ಈ ಮೇರೆಗೆ ದಿನಾಂಕ **02-02-2025** ರಂದು ಚುನಾವಣೆ ನಡೆಸಲು ಉದ್ದೇಶಿಸಿ ಈ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿ ಮತ್ತು ಸೂಚನೆಗಳನ್ನು ನೀಡಿರುತ್ತೇನೆ.

### ಚುನಾವಣಾ ವೇಳಾ ಪಟ್ಟಿ

| ಕ್ರ ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ/ವಾರ/ಸಮಯ | ನಿಯಮ | ವಿವರ |
|---|---|---|---|---|
| 1 | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ | ದಿನಾಂಕ 25-01-2025 ಶನಿವಾರ ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 3-00 ಘಂಟೆಯವರೆಗೆ | 14(ಎ) | ರಿಟರ್ನಿಂಗ್ ಅಧಿಕಾರಿಯವರಿಗೆ ಅಥವಾ ಅವರಿಂದ ನೇಮಿಸಲ್ಪಟ್ಟವರಿಗೆ |
| 2 | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ | ದಿನಾಂಕ 26-01-2025 ಭಾನುವಾರ ಬೆಳಿಗ್ಗೆ 11-00ಘಂಟೆಗೆ | 14(ಬಿ) | ಬ್ಯಾಂಕಿನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 3 | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ಮತಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ. | ದಿನಾಂಕ 26-01-2025 ಭಾನುವಾರ ಉಮೇದುವಾರಿಕೆ ಅರ್ಜಿಗಳ ಪರಿಶೀಲನೆ ನಂತರ | 14ಬಿ(4) | ಬ್ಯಾಂಕಿನ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 4 | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳ ಹಿಂತೆಗೆದುಕೊಳ್ಳಲು ಕೊನೆಯ ದಿನ | ದಿನಾಂಕ 27-01-2025 ಸೋಮವಾರ ಮಧ್ಯಾಹ್ನ 3-00 ಘಂಟೆಯೊಳಗೆ | 14(ಸಿ) | ರಿಟರ್ನಿಂಗ್ ಅಧಿಕಾರಿಯವರಿಗೆ |
| 5 | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ದೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ | ದಿನಾಂಕ 27-01-2025 ಸೋಮವಾರ ಮಧ್ಯಾಹ್ನ 3-00 ಘಂಟೆಯ ನಂತರ | 14(ಡಿ) | ಬ್ಯಾಂಕಿನ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 6 | ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳು ಅಪೇಕ್ಷಿಸಿದಲ್ಲಿ ಚಿಹ್ನೆಗಳ ಹಂಚಿಕೆ | ದಿನಾಂಕ 27-01-2025 ಸೋಮವಾರ ಮಧ್ಯಾಹ್ನ 3-00 ಘಂಟೆಯ ನಂತರ | 14(ಇ) | ಬ್ಯಾಂಕಿನ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 7 | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ 02-02-2025 ಭಾನುವಾರ ಬೆಳಿಗ್ಗೆ 9-00 ಘಂಟೆಯಿಂದ ಸಂಜೆ 4-00 ಘಂಟೆಯವರೆಗೆ | - | ಬಸವೇಶ್ವರ ವಾಣಿಜ್ಯ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560010. |
| 8 | ಮತ ಎಣಿಕೆಯ ದಿನ ಮತ್ತು ದಿನಾಂಕ | ದಿನಾಂಕ 02-02-2025 ಭಾನುವಾರ ಮತದಾನ ಮುಗಿದ ನಂತರ | - | ಬಸವೇಶ್ವರ ವಾಣಿಜ್ಯ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560010 |
| 9 | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ. | ಮತಗಳ ಎಣಿಕೆ ಮುಗಿದ ನಂತರ | - | ಬಸವೇಶ್ವರ ವಾಣಿಜ್ಯ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560010 |

### ಸೂಚನೆಗಳು:

1. ಸಹಕಾರ ಸಂಘಗಳ ಕಾಯ್ದೆ 1959 ಬ್ಯಾಂಕಿನ ಬೈಲಾ ಪ್ರಕಾರ ಒಟ್ಟು 15 (ಹದಿನೈದು ) ನಿರ್ದೇಶಕ ಸ್ಥಾನಗಳನ್ನು ಮಾತ್ರ ಚುನಾಯಿಸಬೇಕಾಗಿರುತ್ತದೆ. ಅದರನ್ವಯ ಆಯ್ಕೆ ಮಾಡಬೇಕಾದ ವಿವರ ಈ ಕೆಳಕಂಡಂತಿವೆ.

   **ಚುನಾವಣೆ ನಡೆಯಬೇಕಾದ 15 ಸ್ಥಾನಗಳು :**

| | | |
|---|---|---|
| 1. | ಸಾಮಾನ್ಯ ಸ್ಥಾನ | 09 ಸ್ಥಾನಗಳು |
| 2. | ಪರಿಶಿಷ್ಟ ಜಾತಿ ಮೀಸಲು | 01 ಸ್ಥಾನ |
| 3. | ಪರಿಶಿಷ್ಟ ಪಂಗಡ ಮೀಸಲು | 01 ಸ್ಥಾನ |
| 4. | ಹಿಂದುಳಿದ ವರ್ಗ ಪ್ರವರ್ಗ 'ಎ' ಮೀಸಲು | 01 ಸ್ಥಾನ |
| 5. | ಹಿಂದುಳಿದ ವರ್ಗ ಪ್ರವರ್ಗ 'ಬಿ' ಮೀಸಲು | 01 ಸ್ಥಾನ |
| 6. | ಮಹಿಳಾ ಮೀಸಲು | 02 ಸ್ಥಾನಗಳು |
| | **ಒಟ್ಟು** | **15 ಸ್ಥಾನಗಳು** |

   **( ಹಿಂದುಳಿದ ವರ್ಗದ ಸದಸ್ಯರಿಗೆ ಮೀಸಲಿರಿಸಿದ ಸ್ಥಾನಗಳನ್ನು ಪ್ರಥಮ ಆಡಳಿತ ಮಂಡಳಿ ಅವಧಿಗೆ ಪ್ರವರ್ಗ 'ಎ' ರಿಂದ ತುಂಬತಕ್ಕದ್ದು, ಎರಡನೇ & ಮೂರನೇ ಆಡಳಿತ ಮಂಡಳಿ ಅವಧಿಗೆ 'ಎ' & 'ಬಿ' ಪ್ರವರ್ಗದ ಸದಸ್ಯರಿಂದ ತುಂಬತಕ್ಕದ್ದು ಹಾಗೂ ನಾಲ್ಕನೇ ಆಡಳಿತ ಮಂಡಳಿ ಅವಧಿಗೆ ಪ್ರವರ್ಗ 'ಎ' ಸದಸ್ಯರಿಂದ ತುಂಬುವುದು ಈ ರೀತಿ ಮೀಸಲಾತಿಯು ಅನುಕ್ರಮವಾಗಿ ಮುಂದುವರೆಸತಕ್ಕದ್ದು. )**

2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಸ್ಥಾನಗಳಿಗೆ ಸ್ಪರ್ಧಿಸುವ ಸದಸ್ಯರು ನಾಮಪತ್ರಗಳೊಂದಿಗೆ ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
3. ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸುವಾಗ ಚುನಾವಣಾ ಠೇವಣಿ ಬಾಬ್ತು ರೂ. 2,000/- ( ರೂ. ಎರಡು ಸಾವಿರ ಮಾತ್ರ) ಗಳನ್ನು ನಗದಾಗಿ ಅಥವಾ ಪೇ ಆರ್ಡರ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಬ್ಯಾಂಕಿನ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ್ದಲ್ಲಿ ಅಥವಾ ಮಹಿಳೆಯಾಗಿದ್ದಲ್ಲಿ, ಅಂತಹ ಅಭ್ಯರ್ಥಿಯು ಪಾವತಿಸಬೇಕಾದ ಠೇವಣಿಯು ಮೇಲೆ ನಿರ್ದಿಷ್ಟಪಡಿಸಿದ ಮೊಬಲಗಿನ ಶೇಕಡಾ ಐವತ್ತರಷ್ಟು ಅಂದರೆ ರೂ. 1,000/- ( ರೂ. ಒಂದು ಸಾವಿರ ಮಾತ್ರ) ಇರತಕ್ಕದ್ದು. ಚುನಾವಣಾ ಠೇವಣಿಯನ್ನು ಸಂದಾಯ ಮಾಡದೆ ಸಲ್ಲಿಸುವ ನಾಮ ಪತ್ರಗಳನ್ನು ತಿರಸ್ಕರಿಸಲಾಗುವುದು. ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಅರ್ಹ ಮತಗಳ 1/6 ರಷ್ಟು ಮತಗಳನ್ನು ಪಡೆಯದ ಸಾಮಾನ್ಯ ಅಭ್ಯರ್ಥಿಗಳ ಹಾಗೂ 1/10 ರಷ್ಟ ಮತಗಳನ್ನು ಪಡೆಯದ ಮೀಸಲು ಅಭ್ಯರ್ಥಿಗಳ ಚುನಾವಣಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಸದಸ್ಯರು ಉಮೇದುವಾರಿಕೆ ಅರ್ಜಿಗಳನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಬ್ಯಾಂಕಿನಿಂದ ಅಥವಾ ನೇರವಾಗಿ ರಿಟರ್ನಿಂಗ್ ಅಧಿಕಾರಿಗಳನ್ನು ಸಂಪರ್ಕಿಸಿ ಪಡೆಯಬಹುದು.
5. ಉಮೇದುವಾರಿಕೆ ಅರ್ಜಿಗಳ ಪರಿಶೀಲನೆ ವೇಳೆ ಅಭ್ಯರ್ಥಿಗಳು ಅಥವಾ ಸೂಚಕರು ಮಾತ್ರ ಹಾಜರಿರಬಹುದು.
6. ಚುನಾವಣೆಗೆ ಸ್ಪರ್ಧಿಸಿ, ಉಮೇದುವಾರಿಕೆ/ನಾಮಪತ್ರದ ಅರ್ಜಿಯನ್ನು ಸಲ್ಲಿಸುವ ಯಾವುದೇ ಅರ್ಹ ಸದಸ್ಯನು ನಾಮಪತ್ರದಲ್ಲಿ ಅಭ್ಯರ್ಥಿಯು ಘೋಷಣೆಯೊಂದಿಗೆ ಸಹಿ ಮಾಡಿ ಸಲ್ಲಿಸುವುದು. ಯಾವ ಅರ್ಹ ಸದಸ್ಯನು ಒಂದು ಮತಕ್ಷೇತ್ರಕ್ಕಿಂತ ಹೆಚ್ಚಿನ ಮತಕ್ಷೇತ್ರಕ್ಕೆ ಅಭ್ಯರ್ಥಿಯಾಗಿರತಕ್ಕದ್ದಲ್ಲ ಹಾಗೂ ಯಾವ ಅರ್ಹ ಸದಸ್ಯನು ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ. ತಪ್ಪಿದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ರಿಟರ್ನಿಂಗ್ ಅಧಿಕಾರಿಯವರಿಗೆ ಅಧಿಕಾರವಿರುತ್ತದೆ.

7. ಉಮೇದುವಾರಿಕೆ ಅರ್ಜಿಯೊಂದಿಗೆ ಚುನಾವಣಾ ಠೇವಣಿಯನ್ನು ಬ್ಯಾಂಕಿಗೆ ಪಾವತಿಸಿದ ರಶೀದಿಯನ್ನು ಲಗತ್ತಿಸಿ ಸಲ್ಲಿಸುವುದು/ ಉಮೇದುವಾರಿಕೆ ವಾಪಸ್ಸಾತಿ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಅಧಿಕಾರಿಯವರಿಗೆ ಚುನಾವಣಾ ವೇಳಾ ಪಟ್ಟಿಯನ್ವಯ ನಿಗಧಿತ ಸಮಯದೊಳಗೆ ಸಲ್ಲಿಸುವುದು.
8. 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮ 14ಇ ರ ಪ್ರಕಾರ ರಿಟರ್ನಿಂಗ್ ಅಧಿಕಾರಿಯವರು ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ರಾಷ್ಟ್ರೀಯ ಪಕ್ಷಗಳ ಮತ್ತು ಕರ್ನಾಟಕ ರಾಜ್ಯದ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳನ್ನು ಹೊರತುಪಡಿಸಿ ಮತ್ತು ಕಾನೂನು ರೀತ್ಯಾ ಚುನಾವಣಾ ಚಿಹ್ನೆ ನೀಡಲು ಅಧಿಕಾರ ಹೊಂದಿರುತ್ತಾರೆ.
9. ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಲ್ಲೂ ಬ್ಯಾಂಕಿನ ಆಡಳಿತ ಕಛೇರಿಯು ತೆರೆದಿರುತ್ತದೆ ಮತ್ತು ಚುನಾವಣಾ ವೇಳಾಪಟ್ಟಿ ರೀತ್ಯಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.
10. ನಿಗದಿತ ಸಮಯ ಮತ್ತು ಅವಧಿಯ ನಂತರ ನೀಡುವ ನಾಮಪತ್ರಗಳನ್ನು ಯಾವುದೇ ಕಾರಣದಿಂದಲೂ ಪಡೆಯುವುದಿಲ್ಲ.
11. ಕ.ಸ.ಸಂ. ನಿಯಮ 1960ರ ನಿಯಮ 13(ಎ) ರನ್ವಯ ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿ (ಐಡೆಂಟಿಟಿ ಕಾರ್ಡ್)ಮತದಾನಕ್ಕೆ ಕಡ್ಡಾಯವಿದ್ದು, ಮತದಾನದ ಸಮಯದಲ್ಲಿ ಗುರುತಿನ ಚೀಟಿಯನ್ನು ಹಾಜರಪಡಿಸತಕ್ಕದ್ದು.
12. ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಕಾಯಿದೆಯಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.
13. ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಕಾಯಿದೆಯಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ.

ಸಹಿ/-
**( ನಾಗೇಶ್ ಶ್ರೀಪಾದ ಶೆಟ್ಟಿ)**
ಚುನಾವಣಾಧಿಕಾರಿ
ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಬೆಂಗಳೂರು.

ಸ್ಥಳ : ಬೆಂಗಳೂರು
ದಿನಾಂಕ : 03-01-2025

---

ಅಂಚೆ ದೃಢೀಕರಣ ಪಡೆದಿರುತ್ತದೆ — ತೆರೆದ ಅಂಚೆ

**ಇವರಿಗೆ,**
**ಶ್ರೀ/ಶ್ರೀಮತಿ**

ಇವರಿಂದ : ಈ ಅಂಚೆ ತಲುಪದಿದ್ದಲ್ಲಿ ಕೆಳಕಂಡ ವಿಳಾಸಕ್ಕೆ ಹಿಂತಿರುಗಿಸುವುದು.

**ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,**

ನಂ.741, 3ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560 010

ದೂರವಾಣಿ ಸಂಖ್ಯೆ : 080-23151204, 23152073


ಸ್ಥಾಪನೆ : 1966
ನೋಂದಣಿ ಸಂಖ್ಯೆ : ಡಿ.ವೈ.ಆರ್ 443

ದೂ. ಪ್ರಧಾನ ಕಛೇರಿ : 23151204, 23152073
ಬಸವೇಶ್ವರನಗರ ಶಾಖೆ : 23231238, 23232587
ಅನ್ನಪೂರ್ಣೇಶ್ವರಿನಗರ ಶಾಖೆ : 23183734


# ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.741, 3ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560 010.

ಇದರ

**ಮುಂದಿನ ಐದು (5) ವರ್ಷಗಳ ಅವಧಿಗೆ**
**ಆಡಳಿತ ಮಂಡಳಿ ಸದಸ್ಯರ ಚುನಾವಣೆ**

**ದಿನಾಂಕ : 02-02-2025 ರ ಭಾನುವಾರ**
**ಸಮಯ : ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ**
**ಸ್ಥಳ : ಬಸವೇಶ್ವರ ವಾಣಿಜ್ಯ, ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ,**
**2ನೇ ವಿಭಾಗ, ರಾಜಾಜಿನಗರ, ಬೆಂಗಳೂರು – 560 010**

ಮಾನ್ಯ ಸದಸ್ಯರೇ,

ನಮ್ಮ ಬ್ಯಾಂಕಿನ ಮುಂದಿನ ಐದು (5) ವರ್ಷಗಳ ಅವಧಿಗೆ ಆಡಳಿತ ಮಂಡಳಿ ಚುನಾವಣೆಯನ್ನು ನಡೆಸಬೇಕಾಗಿದ್ದು, ಚುನಾವಣೆ ನಡೆಸಲು ಸಹಕಾರ ಸಂಘಗಳ ಜಂಟಿ ನಿಬಂಧಕರು , ಕೇಂದ್ರ ಕಛೇರಿ ಇವರು ಶ್ರೀ. ನಾಗೇಶ್ ಶ್ರೀಪಾದ ಶೆಟ್ಟಿ ಅಧೀಕ್ಷಕರು, ಇವರನ್ನು ರಿಟರ್ನಿಂಗ್ ಅಧಿಕಾರಿಯನ್ನಾಗಿ ನೇಮಿಸಿದ್ದು, ಈ ಬಗ್ಗೆ ಸದರಿ ರಿಟರ್ನಿಂಗ್ ಅಧಿಕಾರಿಯವರು ಆಡಳಿತ ಮಂಡಳಿಯ ಆಯ್ಕೆಗಾಗಿ ದಿನಾಂಕ **02-02-2025** ರಂದು ಚುನಾವಣೆಯನ್ನು ನಿಗದಿಪಡಿಸಿ ನೀಡಿರುವ ಚುನಾವಣಾ ವೇಳಾ ಪಟ್ಟಿ ಮತ್ತು ಸೂಚನೆಗಳನ್ನು ಈ ನೋಟಿಸ್‌ನೊಂದಿಗೆ ಲಗತ್ತಿಸಿದೆ. ಆದ್ದರಿಂದ ಮಾನ್ಯ ಸದಸ್ಯರು ಸದರಿ ಆಡಳಿತ ಮಂಡಳಿ ಸದಸ್ಯರ ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕೆಂದು ಈ ಮೂಲಕ ವಿನಂತಿಸಲಾಗಿದೆ.

ಸ್ಥಳ : ಬೆಂಗಳೂರು
ದಿನಾಂಕ : 16-01-2025

ತಮ್ಮ ವಿಶ್ವಾಸಿ
ಸಹಿ/-
(ಅನುಷ .ಎಂ.ಎನ್)
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಪ್ರ)

**ಸೂಚನೆ :**

ಎಲ್ಲಾ ಸದಸ್ಯರು ಬ್ಯಾಂಕಿನಿಂದ ವಿತರಿಸಿದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿ ಮತ್ತು ಇದುವರೆಗೂ ತಮ್ಮ ಗುರುತಿನ ಚೀಟಿಯನ್ನು ಪಡೆಯದ ಸದಸ್ಯರು 2 ಭಾವ ಚಿತ್ರಗಳನ್ನು ,ಪಾನ್ ಕಾರ್ಡ್ ಮತ್ತು ಆಧಾರಕಾರ್ಡಿನ ಪ್ರತಿ ನೀಡಿ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆಯಬಹುದು.